ಅಧ್ಯಕ್ಷರು.—ಇಷ್ಟು ಉದ್ವೇಗದಿಂದ ವ್ಯಾತನಾಡಿದರೆ ಹೇಗೆ? ನೀರು ಇಲ್ಲದೇ ಇರುವ ಕಷ್ಟವನ್ನು ನಾವೆಲ್ಲರೂ ಅನುಭವಿಸಿದ್ದೇವೆ. ಮಾನ್ಯ ಸದಸ್ಯರು ಇಲ್ಲಿ ಕೂಗಾಡಿದ ತಕ್ಷಣ ಅಲ್ಲಿ ನೀರು ಬರುವುದಿಲ್ಲ. ಗಂಗಾ ಮಾತೆ ಬರುವುದಿಲ್ಲ. ಅಲ್ಲಿನ ಕೊರತೆ ಏನೆಂಬುದನ್ನು ಸರ್ಕಾರಕ್ಕೆ ತಿಳಿಸಿ. ಆದರೆ ಮಾನ್ಯ ಸದಸ್ಯರನ್ನು ಈಗ ಮಾತನಾಡಲು ಅವಕಾಶ ಕೊಟ್ಟಿದ್ದೇ ತಪ್ಪಾಗಿದೆ. ಇದಕ್ಕೆ ಸಂಬಂಧಪಟ್ಟ ರೂಲ್ ಇದೆ. ಮಾನ್ಯ ಶ್ರೀ ಚನ್ನಬಸಪ್ಪನವರು ಹೇಳಿದ ಹಾಗೆ ವಿಧಿ ನಿಯಮಗಳಿವೆ. ಎಲ್ಲರೂ ರೂಲ್ಸ್‌ಗೆ ಅನುಗುಣವಾಗಿ ಮಾತನಾಡಬೇಕು.

LEVY ON RAGI CROP

ಶ್ರೀ ಬಿ. ಪುಟ್ಟಸ್ವಾಮಯ್ಯ.—ಈ ಸರ್ಕಾರ ಮೈಸೂರು ರಾಜ್ಯದಲ್ಲಿ ಪ್ರಾಮುಖ್ಯವಾಗಿ ಖುಷ್ಕಿ ಬೆಳೆಯಾದ ರಾಗಿ ಲೆವಿಯನ್ನು ಗೊತ್ತುಪಡಿಸಿದ್ದಾರೆ. ಇದರ ಬಗ್ಗೆ ನಾನು ಒಂದು ಸೂಚನೆಯನ್ನು ಕಳುಹಿಸಿದ್ದೇನೆ. ಒಂದು ಎಕರೆಗೆ 40 ಕೆ. ಜಿ. ರಾಗಿಯನ್ನು ಕೊಡಬೇಕೆಂದು ವಿಧಿಸಿದ್ದಾರೆ. ದುರಾದೃಷ್ಟದಿಂದ ಈ ರಾಜ್ಯದಲ್ಲಿ ಮಳೆ ಸಕಾಲದಲ್ಲಿ ಆಗದೇ ಇರುವಾಗ, ರೈತರಿಗೆ ಅಲ್ಲಿನ ಅಧಿಕಾರಿಗಳು ಈಗಾಗಲೇ ನೋಟೀಸ್ ಕೊಟ್ಟು ಅದರ ಒಂದು ವಸೂಲಿಗೆ ಹೋಗಿದ್ದಾರೆ. ಇದು ಸರಿಯಲ್ಲ ಈಗಾಗಲೇ ರೈತರು ಬತ್ತದ ವಸೂಲಿಗೆ ಹೋದಾಗ, ಬೇಕಾದಷ್ಟು ಲಂಚ ಕೊಟ್ಟು ಬೇಸತ್ತಿದ್ದಾರೆ. ರೈತರಿಗೆ ಸಕಾಲದಲ್ಲಿ ಗೊಬ್ಬರ ಕೊಡುವುದಕ್ಕೆ ಆಗದೆ ಇರುವ ಸರ್ಕಾರ ಲೆವಿ ವಸೂಲಿಗೆ ಹೋದರೆ ಹೇಗೆ? ಇದರಿಂದ ರೈತರು ಹೆಚ್ಚಿಗೆ ನೊಂದಿದ್ದಾರೆ. ಅವರ ಪರಿಸ್ಥಿತಿಯನ್ನು ಈ ಸರ್ಕಾರ ನೋಡುವ ಹಾಗೆಯೇ ಇಲ್ಲ.

ಅಧ್ಯಕ್ಷರು.—ನನಗೆ ಮಾನ್ಯ ಸದಸ್ಯರು ಕಳುಹಿಸಿರುವ ಕಾಗದ ಇನ್ನೂ ಒಂದಿಲ್ಲ. ಅದು ಬಂದ ಕೂಡಲೇ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.— ರೈತರ ಬಗ್ಗೆ ಕಳಕಳಿ ಇಟ್ಟಿರುವ ಬಗ್ಗೆ ಈ ಸಭೆಯಲ್ಲಿ ಅನೇಕರು ಇದ್ದಾರೆ. ಈ ಸರ್ಕಾರಕ್ಕೆ ನಿಜವಾಗಿ ಗೌರವ, ಪ್ರೀತಿ, ವಿಶ್ವಾಸ ಬರಬೇಕಾದರೆ, ರೈತರ ಬಗ್ಗೆ ತುಂಬಾ ಎಚ್ಚರಿಕೆಯಿಂದ ಇರಬೇಕು ಅವರು ಇನ್ನೂ ಸಂಘಸಂಸ್ಥೆಗಳನ್ನು ಮಾಡಿಲ್ಲ. ಸರ್ಕಾರಕ್ಕೆ ಪ್ರತಿಭಟನೆಯನ್ನೂ ಮಾಡಿಲ್ಲ. ಆದರಿಂದ ನಾನು ಈ ಸರ್ಕಾರವನ್ನು ಕೈಜೋಡಿಸಿ ಪ್ರಾರ್ಥನೆ ಮಾಡುತ್ತೇನೆ. ಈ ರಾಜ್ಯದಲ್ಲಿ ರೈತ ಬೆಳೆಯುವ ಖುಷ್ಕಿ ಬೆಳೆಗೆ ಚೆನ್ನಾಗಿ ಮೈರು ಬಾರದೆ ಈ ವರ್ಷ ರಾಗಿ ಬೆಳೆಗೆ ಬಹಳ ಪೆಟ್ಟಾಗಿದೆ.

ಅನೇಕ ಭಾಗದಲ್ಲಿ ರೈತರಿಗೆ ತಿನ್ನುವುದಕ್ಕೇ ರಾಗಿಯಿಲ್ಲ. ಹಾಗಿರುವಾಗ ಅವರು 40 ಸೇರು ಲೆವಿ ಕೊಡಬೇಕೆಂದರೆ ಎಲ್ಲಿಂದ ತಂದುಕೊಡುವುದು ? ಈ ರಾಗಿ ಲೆವಿಯನ್ನು ರದ್ದು ಮಾಡತಕ್ಕ ಬಗ್ಗೆ ಸರ್ಕಾರದವರು ಒಂದು ನಿರ್ದಿಷ್ಟವಾದ ಹೇಳಿಕೆಯನ್ನು ಕೂಡಲೇ ಹೊರಡಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ಶ್ರೀ ಕೆ. ಆರ್. ಶ್ರೀನಿವಾಸಲುನಾಯ್ಡು ಅವರು ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ವಂದನಾರ್ಪಣೆಯ ನಿರ್ಣಯವನ್ನು ಸಭೆಯ ಮುಂದೆ ಮಂಡಿಸಲು ಸೂಚಿಸಲಿಚ್ಛಿಸುತ್ತೇನೆ.

MOTION OF RANKS TO THE GOVERNOR'S ADDRESS

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು (ಶಾಂತಿನಗರ) :—

ಸನ್ಮಾನ್ಯ ಅಧ್ಯಕ್ಷಣಿಯರೇ : "ದಿನಾಂಕ ಫೆಬ್ರವರಿ 25, 1974 ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ರಾಜ್ಯಪಾಲರ ಅವರು ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವುಗಳು ಸನ್ಮಾನ್ಯ ರಾಜ್ಯಪಾಲರವರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇನೆ.

ಶ್ರೀ ಪಿ. ಪಿ. ಹೆಗಡೆ (ಚಿಕ್ಕೋಡಿ) :—ಮಾನ್ಯ ಅಧ್ಯಕ್ಷಣಿಯರೇ, ನಾನು ಈಗತಾನೆ ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡುರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸುತ್ತೇನೆ.

ಅಧ್ಯಕ್ಷರು : ಶ್ರೀ ಶ್ರೀನಿವಾಸಲು ನಾಯ್ಡು ಅವರು ಸಭೆಯ ಮುಂದೆ ಮಂಡಿಸಿರತಕ್ಕ ವಂದನಾರ್ಪಣೆಯ ನಿರ್ಣಯ ಹೀಗೆ ಇದೆ :—"ದಿನಾಂಕ ಫೆಬ್ರವರಿ 25, 1974ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ಅವರ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವುಗಳು ಸನ್ಮಾನ್ಯ ರಾಜ್ಯಪಾಲರವರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇನೆ".

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು : ಮಾನ್ಯ ಅಧ್ಯಕ್ಷಣಿಯರೇ: ಕಳೆದ ಇದೇ ತಿಂಗಳು 25ನೇ ತಾರೀಖಿನ ದಿನ ಮಾನ್ಯ ರಾಜ್ಯಪಾಲರು—ರವರು ಎಷ್ಟೊಳ್ಳೆ ಅರಿತು ನುರಿತ ಹಾಗೂ ಬಹಳ ಅನುಭವವುಳ್ಳ ರಾಜಕಾರಿಣಿಗಳು, ಈ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ, ಅಂದರೆ ಇಂದು ಇಲ್ಲಿಯವರೆಗೆ ಮತ್ತೆ ಮುಂದೆ